9-12-202

(1)

**ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಎಸ್.ವಿ.ಸಂಕನೂರ ಇವರು ಪ್ರಸ್ತಾಪಿಸಿರುವ ಶೂನ್ಯವೇಳೆಯ ಸೂಚನೆಗೆ ಉತ್ತರಿಸುವ ಬಗ್ಗೆ:-**

**ವಿಷಯ:-**

ಸಂಯುಕ್ತ ಕರ್ನಾಟಕ, ಕನ್ನಡಪ್ರಭ, ವಿಜಯವಾಣಿ, ಮುಂತಾದ ದಿನಪತ್ರಿಕೆಗಳಲ್ಲಿ ಪ್ರಕಟವಾಗಿರುವಂತೆ ಸರ್ಕಾರ ಮಕ್ಕಳಲ್ಲಿಯ ರಕ್ತ ಹೀನತೆ ಹಾಗೂ ಪೋಷಕಾಂಶಗಳ ನ್ಯೂನತೆಯನ್ನು ಹೋಗಲಾಡಿಸಲು ಅಜೀಂ ಪ್ರೇಮಜಿ ಪೌಂಡೇಶನ್ ಸಹಯೋಗದಲ್ಲಿ ರೂ.1500 ಕೋಟಿ ದೇಣಿಗೆಯೊಂದಿಗೆ 1ನೇ ತರಗತಿಯಿಂದ 10 ನೇ ತರಗತಿ ಮಕ್ಕಳಿಗೆ ವಾರದಲ್ಲಿ 6 ದಿನ ಮೊಟ್ಟೆ ವಿತರಿಸಲು ಹಾಗೂ ತಿನ್ನದೇ ಇರುವವರಿಗೆ ಶೇಂಗಾ ಚಿಕ್ಕಿ ಅಥವಾ ಬಾಳೆಹಣ್ಣು ಒದಗಿಸುವ ಯೋಜನೆ ಜಾರಿ ಮಾಡಿರುವುದು ಸಂತೋಷದ ಸಂಗತಿ.

ಈ ಯೋಜನೆ ಪ್ರಥಮ ಬಾರಿಗೆ ಜಾರಿಗೆ ತರುವ ಸಂದರ್ಭದಲ್ಲಿ ಒಂದು ಮೊಟ್ಟೆಯ ಬೆಲೆ ಮಾರ್ಕೆಟ್‌ನಲ್ಲಿ 5 ರೂ ಮಾತ್ರ ಇತ್ತು. ಅದನ್ನು ಬೇಯಿಸಲು, ಸಿಪ್ಪೆ ಸುಲಿಯಲು ಎಲ್ಲಾ ಸೇರಿ ಸರ್ಕಾರ 6 ರೂ ಆಗುತ್ತಿತ್ತು. ಅಂದು ಸರ್ಕಾರ ನಿರ್ವಹಣೆಗೆ ನೀಡುತ್ತಿದ್ದ 6 ರೂ ಸರಿ ಹೋಗುತ್ತಿತ್ತು. ಆದರೆ ಇಂದು ಒಂದು ಮೊಟ್ಟೆಯ ಬೆಲೆ 6.50 ಪೈ ಆಗಿದ್ದು, ಅದನ್ನು ಬೇಯಿಸಿ, ಸಿಪ್ಪೆ ಸುಲಿದು ಮಕ್ಕಳಿಗೆ ವಿತರಿಸಲು ಹೆಚ್ಚುವರಿಯಾಗಿ ಶಿಕ್ಷಕರ ಜೇಬಿನಿಂದ ಪ್ರತಿ ಮೊಟ್ಟೆಗೆ ರೂ. 1 ರಿಂದ 1.50 ಪೈ ಹೆಚ್ಚು ಖರ್ಚು ಮಾಡುತ್ತಿರುವರು. ಇದರಿಂದ ಶಿಕ್ಷಕರಿಗೆ ಆರ್ಥಿಕ ಹೊರೆ ಆಗಿದೆ.

ಈ ಒಂದು ಯೋಜನೆಯಲ್ಲಿ ಶಿಕ್ಷಕರು ಮೊಟ್ಟೆ ಖರೀದಿಯಿಂದ ಹಿಡಿದು ವಿತರಣೆಯವರೆಗೆ 15 ದಾಖಲೆಗಳನ್ನು ನಿರ್ವಹಿಸಬೇಕಾಗಿದ್ದು, ಸುಮಾರು ಸಮಯ ವ್ಯರ್ಥವಾಗುತ್ತಿರುವ ಹಿನ್ನಲೆಯಲ್ಲಿ ಮಕ್ಕಳ ಕಲಿಕೆಯ ಮೇಲೆ ಪರಿಣಾಮ ಬೀರುತ್ತಿರುವುದು. ಈ ಒಂದು ಕಾರಣದಿಂದ ಶಿಕ್ಷಕರು ಬಿಸಿಯೂಟ, ಮೊಟ್ಟೆ ವಿತರಣೆ, ಕ್ಷೀರಭಾಗ್ಯ ಮುಂತಾದ ಕಾರ್ಯಕ್ರಮಗಳನ್ನು ಜಾರಿ ಮಾಡಲು ದಾಖಲೆ ನಿರ್ವಹಣೆ ಮಾಡಲು ಪ್ರತ್ಯೇಕ ಸಿಬ್ಬಂದಿ ನಿರ್ವಹಿಸಲು ಒತ್ತಾಯಿಸುತ್ತಿರುವರು. ಇತ್ತೀಚೆಗೆ ಅಜೀಂ ಪ್ರೇಮಜಿ ಫೌಂಡೇಶನ್‌ರವರು ಮೊಟ್ಟೆ ವಿತರಣೆ ಕಾರ್ಯಕ್ರಮ ಅನುಷ್ಠಾನ ಕುರಿತು ತಪಾಸಣೆ ಮಾಡಲು ತಮ್ಮದೇ ಆದ ತಂಡ ನೇಮಕ ಮಾಡಿದ್ದು ಅವರ ವರದಿ ಆದರಿಸಿ ಸಣ್ಣಪುಟ್ಟ ಲೋಪದೋಷ ಇದ್ದಾಗ್ಯೂ ಕೆಲವೊಂದು ಬಿ.ಇ.ಓ ಹಾಗೂ ಅಕ್ಷರದಾಸೋಹ ಯೋಜನೆ ಅಧಿಕಾರಿಗಳಿಗೆ ಸಂಬಂಧಪಟ್ಟ ಆಯುಕ್ತರು ನೋಟಿಸ್ ಕೂಡ ಜಾರಿ ಮಾಡಿದ್ದುಂಟು.

ಈ ಎಲ್ಲ ವಿಚಾರಗಳ ಹಿನ್ನೆಲೆಯಲ್ಲಿ ಇಲಾಖೆಯವರು ಪ್ರತಿ ಮೊಟ್ಟೆಗೆ ಸದ್ಯ ನೀಡುತ್ತಿರುವ ರೂ. 6 ನ್ನು ರೂ. 7.50 ಪೈ ವರೆಗೂ ಹೆಚ್ಚಿಸಿ ಮತ್ತು ಈ ಕಾರ್ಯಕ್ರಮ ನಿರ್ವಹಣೆಗೆ ಪ್ರತ್ಯೇಕ ಸಿಬ್ಬಂದಿ ನೇಮಿಸಲು ಒತ್ತಾಯಿಸುವೆನು.

**ಉತ್ತರ :**

ರಾಜ್ಯ ಸರ್ಕಾರದ ಮಹಾತ್ವಾಕಾಂಕ್ಷಿ ಕಾರ್ಯಕ್ರಮವಾದ ಮಧ್ಯಾಹ್ನ ಉಪಹಾರ ಯೋಜನೆಯಡಿ ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ 1 ರಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಅಪೌಷ್ಠಿಕತೆ ಮತ್ತು ರಕ್ತಹೀನತೆ ನಿವಾರಿಸಲು ವಾರದಲ್ಲಿ 6 ದಿನ ಮಧ್ಯಾಹ್ನ ಬಿಸಿಯೂಟದೊಂದಿಗೆ ಪೂರಕ ಪೌಷ್ಠಿಕ ಆಹಾರವಾದ ಮೊಟ್ಟೆ/ಶೇಂಗಾ ಚಿಕ್ಕಿ/ಬಾಳೆಹಣ್ಣು ವಿತರಿಸಲಾಗುತ್ತಿದೆ.

ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಈ ಕಾರ್ಯಕ್ರಮವು ಮಕ್ಕಳ ಸಮಗ್ರ ದೈಹಿಕ ಆರೋಗ್ಯದ ಬೆಳವಣಿಗೆಗೆ ಪೂರಕವಾಗಿದೆ.

ರಾಜ್ಯ ಸರ್ಕಾರದಿಂದ 2 ದಿನಗಳಿಗೆ ಸಂಬಂಧಿಸಿದ ಪೂರಕ ಪೌಷ್ಠಿಕ ಆಹಾರದ ವೆಚ್ಚವನ್ನು ಭರಿಸಲಾಗುತ್ತಿದ್ದು, ಉಳಿದ 4 ದಿನಗಳ ವೆಚ್ಚವನ್ನು ಅಜೀಂ ಪ್ರೇಮ್‌ಜಿ ಫೌಂಡೇಷನ್, ಬೆಂಗಳೂರು ಈ ಸಂಸ್ಥೆಯಿಂದ ಭರಿಸಲಾಗುತ್ತಿದೆ.

ಪ್ರತಿ ವಿದ್ಯಾರ್ಥಿಗೆ ಪೂರಕ ಪೌಷ್ಠಿಕ ಆಹಾರ ವಿತರಣೆಗೆ ರೂ.6/-ಗಳ ಒಂದು ದಿನದ ಘಟಕ ವೆಚ್ಚವನ್ನು ನಿಗದಿಪಡಿಸಲಾಗಿದೆ.

ಸದರಿ ಘಟಕ ವೆಚ್ಚದಲ್ಲಿ ಮೊಟ್ಟೆ ಖರೀದಿ ಮತ್ತು ಇತರೆ ವೆಚ್ಚಗಳಿಗೆ ನಿಗದಿಪಡಿಸಲಾದ ಮೊತ್ತದ ವಿವರ ಕೆಳಕಂಡಂತಿದೆ:

| **ವೆಚ್ಚ ವಿವರ** | **ನಿಗದಿಪಡಿಸಲಾದ ಮೊತ್ತ ರೂಪಾಯಿಗಳಲ್ಲಿ** |
|---|---|
| ಮೊಟ್ಟೆ ಖರೀದಿಗೆ | ರೂ.5/- |
| ಮೊಟ್ಟೆ ಬೇಯಿಸಲು ಇಂಧನ ವೆಚ್ಚ | ರೂ.0.50/- |
| ಬೇಯಿಸಿದ ಮೊಟ್ಟೆಯ ಸಿಪ್ಪೆಯನ್ನು ಸುಳಿಯಲು ನಿಗದಿಪಡಿಸಿದ ಮೊತ್ತ | ರೂ.0.30/- |
| ಸಾರಿಗೆ ವೆಚ್ಚ | ರೂ.0.20/- |

ಶಾಲೆಗಳಲ್ಲಿ ಬಿಸಿಯೂಟ ಸಿದ್ದಪಡಿಸಲು ಪೂರಕ ಪೌಷ್ಠಿಕ ಆಹಾರ ವಿತರಿಸಲು ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಅಡುಗೆ ಸಿಬ್ಬಂದಿಯವರನ್ನು ನೇಮಕ ಮಾಡಿಕೊಳ್ಳಲಾಗಿದೆ. ಈ ಕಾರ್ಯಕ್ರಮದ ಮೇಲುಸ್ತುವಾರಿಯನ್ನು ಮಾತ್ರ ಶಿಕ್ಷಕರು ನೋಡಿಕೊಳ್ಳುತ್ತಾರೆ.

ಮೊಟ್ಟೆಯ ದರ ಮಾರುಕಟ್ಟೆಯಲ್ಲಿ ನಿರ್ದಿಷ್ಟವಾಗಿ ನಿಗದಿಯಾಗಿರುವುದಿಲ್ಲ. ಮೊಟ್ಟೆಯ ಲಭ್ಯತೆಯನ್ನು ಆಧರಿಸಿ ಮೊಟ್ಟೆಯ ದರದಲ್ಲಿ ಏರಿಳಿತವಾಗುತ್ತದೆ. ಆದಕಾರಣ ರಾಜ್ಯ ಸರ್ಕಾರದಿಂದ ಪೂರಕ ಪೌಷ್ಠಿಕ ಆಹಾರಗಳಾದ ಮೊಟ್ಟೆ/ಚಿಕ್ಕಿ/ಬಾಳೆಹಣ್ಣು ವಿತರಿಸಲು ಪ್ರತಿ ವಿದ್ಯಾರ್ಥಿಗೆ ಒಂದು ದಿನಕ್ಕೆ ರೂ.6/-ಗಳ ಘಟಕ ವೆಚ್ಚವನ್ನು ನಿಗದಿಪಡಿಸಲಾಗಿದೆ.

ಮುಂದುವರೆದು ಈ ಕುರಿತು ಸ್ಥಳ ಭೇಟಿ ನೀಡಿ ಪರಿಶೀಲನೆ ಮಾಡಿದ್ದು, ಸರ್ಕಾರವು ನಿಗಧಿಮಾಡಿರುವ ಮೊಟ್ಟೆಯ ದರವು ಸೂಕ್ತವಾಗಿರುವುದು ಕಂಡುಬಂದಿರುತ್ತದೆ. ಪೂರಕ ಪೌಷ್ಠಿಕ ಆಹಾರ ಖರೀದಿ ಪ್ರಕ್ರಿಯೆಯನ್ನು ಶಾಲಾ ಹಂತದಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಅಧ್ಯಕ್ಷರು, ಶಾಲಾ ಮುಖ್ಯ ಶಿಕ್ಷಕರು ಹಾಗೂ ಇತರರನ್ನೊಳಗೊಂಡ ಖರೀದಿ ಸಮಿತಿಯಿಂದ ನಿರ್ವಹಿಸಲಾಗುತ್ತಿದೆ.

ಪೂರಕ ಪೌಷ್ಠಿಕ ಆಹಾರ ವಿತರಣೆಯ ಪ್ರಗತಿ ವಿವರಗಳನ್ನು SATS-MDM ಪೋರ್ಟಲ್ ನಲ್ಲಿ ಸಂಗ್ರಹಿಸಲಾಗುತ್ತಿದ್ದು, ಸದರಿ ಸಂಗ್ರಹಣಾ ಪ್ರಕ್ರಿಯೆಯು ತುಂಬಾ ಸರಳವಾಗಿದ್ದು, ಸದರಿ ಪ್ರಕ್ರಿಯೆಯ ಕುರಿತು ಮುಖ್ಯ ಶಿಕ್ಷಕರಿಗೆ ಈಗಾಗಲೇ ತರಬೇತಿಯನ್ನು ನೀಡಲಾಗಿದೆ.

ಈ ಹಿನ್ನೆಲೆಯಲ್ಲಿ, ಮೊಟ್ಟೆ ಖರೀದಿ ದರವನ್ನು ಹೆಚ್ಚಿಸುವ ಮತ್ತು ಪೂರಕ ಪೌಷ್ಠಿಕ ಆಹಾರ ವಿತರಣೆ ಕಾರ್ಯಕ್ರಮದ ನಿರ್ವಹಣೆಗೆ ಪ್ರತ್ಯೇಕ ಸಿಬ್ಬಂದಿಯನ್ನು ನೇಮಿಸುವ ಬಗ್ಗೆ ಸರ್ಕಾರದ ಹಂತದಲ್ಲಿ ಯಾವುದೇ ಪ್ರಸ್ತಾವನೆಗಳು ಬಾಕಿ ಇರುವುದಿಲ್ಲ.

**ಸಂಖ್ಯೆ: ಇಪಿ 115 ಎಂಎಂಎಸ್ 2024**

**(ಎಸ್.ಮಧುಬಂಗಾರಪ್ಪ)**
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ**
**ಸಚಿವರು**